**ಸಾಕ್ಷಿಗೆ ದಿನಾಂಕಃ08-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. SNM ವಕೀಲರಿಂದ ::**

ನನ್ನ ತಂದೆಯ ಹೆಸರು ಸಿದ್ದರಾಮಪ್ಪ ಆಗಿರುತ್ತದೆ. ನನ್ನ ತಂದೆಗೆ ಒಟ್ಟು 7 ಜನ ಮಕ್ಕಳು ಇರುತ್ತಾರೆ. ಅವರಲ್ಲಿ 3 ಗಂಡು ಹಾಗೂ 4 ಹೆಣ್ಣು ಮಕ್ಕಳು. ಅವರಲ್ಲಿ ಗಂಗಮ್ಮ ಎನ್ನುವವರು ಮೃತರಾಗಿರುತ್ತಾರೆ. ನನ್ನ ಮದುವೆಯಾಗಿ ಸುಮಾರು 50 ವರ್ಷ ಆಗಿರುತ್ತದೆ. ನನ್ನ ತಂದೆಯ ಜೀವಿತಾ ಅವಧಿಯಲ್ಲಿ ಅವರ ಹೆಣ್ಣು ಮಕ್ಕಳ ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯು ಕಾಟೀಗನೆರೆ ಗ್ರಾಮ ಹೊರತುಪಡಿಸಿ ಬೇರೆ ಎಲ್ಲೂ ಯಾವುದೇ ಜಮೀನು ಅನ್ನು ಅವರ ಜೀವಿತಾ ಅವಧಿಯಲ್ಲಿ ಮಾಡಿರುವುದಿಲ್ಲ. ಸದರಿ ದಾವೆಯನ್ನು ಹೂಡಲು ವಾದಿಗಳಾದ ನಾವೇ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸರಿ. ನನ್ನ ಪ್ರಕಾರ ವಾದ ಪತ್ರದ 3 ನೇ ಪಾರಾದಲ್ಲಿ ಜುಬಾನೆ ಪಾಲುಪಾರಿಕತ್ತಿನ ಬಗ್ಗೆ ಹೇಳಿರುವ ವಿಚಾರ ಸರಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಬೇರೆ ಬೇರೆಯಾಗಿ ವಾಸ ಮಾಡಲು ಶುರು ಮಾಡಿ ಸುಮಾರು 30 ವರ್ಷಗಳ ಕಳೆದಿರುತ್ತದೆ. 30 ವರ್ಷಗಳಿಂದ ಪ್ರತಿವಾದಿಗಳು ಬೇರೆ ಬೇರೆ ಜಮೀನುಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ನನ್ನ ಸಹೋದರರ ಹೆಸರಿಗೆ ಯಾವಾಗ ಬದಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವರ್ಷ ಗೌರಿ ಹಬ್ಬದ ಸಮಯದಲ್ಲಿ ನನ್ನ ಸಹೋದರರು ವಾದಿಗಳಾದ ನಮಗೆ ಮೊದಲಿನಿಂದ ಬಾಗಿಣ ನೀಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ 1 ಗಂಡು ಮತ್ತು 1 ಹೆಣ್ಣು ಮಗು ಇರುತ್ತದೆ. ನನ್ನ ಮಗಳನ್ನು 3 ನೇ ಪ್ರತಿವಾದಿಗೆ ಮದುವೆ ಮಾಡಿ ನೀಡಿರುತ್ತೇವೆ.3 ನೇ ಪ್ರತಿವಾದಿ ಮೃತರಾಗಿ ಇಲ್ಲಿಗೆ 4 ವರ್ಷ ಕಳೆದಿರುತ್ತದೆ. ದಾವಾ ಹೂಡುವ ಸಮಯದಲ್ಲಿ 3 ನೇ ಪ್ರತಿವಾದಿ ಜೀವಂತ ಇದ್ದರು ಎಂದರೆ ಸರಿ. ನಾನು ಮತ್ತು 3 ನೇ ಪ್ರತಿವಾದಿ ಮೊದಲಿನಿಂದ ಒಳ್ಳೆಯ ವಿಶ್ವಾಸದಲ್ಲಿ ಇರುತ್ತೇವೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಮಗಳನ್ನು ಹಿಂದೆ ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ಮತ್ತು ನನ್ನ ಮಗಳ ಮಾತನ್ನು ನಾನು ಹಿಂದಿನಿಂದ ಕೇಳುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ನನ್ನನ್ನು ಹಾಗೂ ಇತರೇ ಕುಟುಂಬ ಸದಸ್ಯರನ್ನು ಸೇರಿಸಿ ಇದೇ ನ್ಯಾಯಾಲಯದಲ್ಲಿ ವಿಭಾಗ ಕೋರಿ ಹಿಂದೆ ಒಂದು ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಿಂದೆಯೇ ಕುಟುಂಬದ ಆಸ್ತಿಗಳಲ್ಲಿ ಭಾಗ ಪಡೆದುಕೊಂಡು ಹೊರಗೆ ಹೋಗಿರುತ್ತಾರೆ ಎಂದರೆ ಸರಿ. ಸದರಿ ಈಶ್ವರಪ್ಪರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಈಶ್ವರಪ್ಪ ಪ್ರಸ್ತುತದಲ್ಲಿ ಚೆನ್ನಗಿರಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಈಶ್ವರಪ್ಪ ಕಾಟೀಗನೆರೆ ಗ್ರಾಮದಲ್ಲಿ ಇದ್ದ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಕ್ಕ ಗಂಗಮ್ಮನನ್ನು ಕಡೂರು ತಾಲ್ಲೂಕಿನ ಕಾಮಿಣೆ ಗ್ರಾಮದ ವ್ಯಕ್ತಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. 1 ನೇ ಪ್ರತಿವಾದಿ ತನ್ನ ಎಲ್ಲಾ ಆಸ್ತಿಗಳನ್ನು 4 ರಿಂದ 8 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸಿದ್ದರಾಮಪ್ಪ ರವರ ಮಗಳನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಮದುವೆಯ ನಂತರದಲ್ಲಿ ಸಿದ್ದರಾಮಪ್ಪನ ಸಂಪೂರ್ಣ ಆಸ್ತಿಯನ್ನು 2 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳ ಬಗ್ಗೆ ಆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ಹಿಂದೆ ಪಡೆದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ. ಕುಟುಂಬದ ಆಸ್ತಿಗಳಲ್ಲಿ ಯಾವುದೇ ಆಸ್ತಿಗಳು ಬೇರೆಯವರಿಗೆ ಮಾರಾಟ ಅಥವಾ ವರ್ಗಾವಣೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಈಶ್ವರಪ್ಪ ಮಾರಾಟ ಮಾಡಿರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಮಗಳನ್ನು 3 ನೇ ಪ್ರತಿವಾದಿಗೆ 25 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿರುತ್ತೇನೆ. ನನ್ನ ಮಗಳ ಮದುವೆಯ ಸಮಯದಲ್ಲಿ ನನ್ನ ಸಹೋದರರೆಲ್ಲರೂ ಒಟ್ಟಿಗೆ ಒಂದೇ ಮನೆಯಲ್ಲಿ ವಾಸ ಮಾಡಿಕೊಂಡಿದ್ದರು. 3 ನೇ ಪ್ರತಿವಾದಿಗೆ ಎಷ್ಟು ಎಕರೆ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

3 ನೇ ಪ್ರತಿವಾದಿ ಅವರ ಜೀವಿತಾ ಅವಧಿಯಲ್ಲಿ ಪಿರಿಯಾಪಟ್ಟಣದ ತಾಲ್ಲೂಕು ಪಂಚಾಯಿತಿ ಅಧಿಕಾರಿ ಆಗಿದ್ದರು. 3 ನೇ ಪ್ರತಿವಾದಿ ಹಾಗೂ ನನ್ನ ಮಗಳಿಗೆ ಒಟ್ಟು ಇಬ್ಬರು ಮಕ್ಕಳು ಇರುತ್ತಾರೆ. 3 ನೇ ಪ್ರತಿವಾದಿ ತನ್ನ ಕೆಲಸದ ಆದಾರಯದಿಂದ ಯಾವೆಲ್ಲಾ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: